ಕಿರುಚಿತ್ರ

# ಭಯದ ನೆರಳು

■ ಗೌರಿ




ಕೊರೊನಾ ಕುರಿತ ಭಯ ಬಹುತೇಕ ಕಡಿಮೆಯಾಗಿದೆ. ಅದರ ನಾಲ್ಕನೇ ಅಲೆಯ ಹೊಡೆತ ಅಲ್ಲಲ್ಲಿ ಕಾಣಿಸುತ್ತಿದ್ದರೂ ಅದರ ಕುರಿತು ಭಯ ಮೊದಲಿನಂತಿಲ್ಲ; ಮೊದಲಿನಷ್ಟಿಲ್ಲ. ಆದರೆ ಕೊರೊನಾ ಕಾಲದ ಕರಾಳ ನೆನಪುಗಳು ಮಾತ್ರ ಜನರ ಮನಸ್ಸಿನಿಂದ ಮರೆಯಾಗಿಲ್ಲ. ಆ ನೆನಪು ಬರೀ ವೈರಸ್‌ನಿಂದ ಅನುಭವಿಸಿದ ಅನಾರೋಗ್ಯ, ಕಳೆದುಕೊಂಡ ಜನರನ್ನಷ್ಟೇ ಒಳಗೊಂಡಿಲ್ಲ. ಆ ವೈರಸ್ ಹುಟ್ಟುಹಾಕಿದ್ದ ಭೀತಿ ಮತ್ತದರಿಂದ ನಮ್ಮ ಬದುಕಿನಲ್ಲಿ ಉಂಟಾದ ಅಸಮತೋಲನವನ್ನೂ ಒಳಗೊಂಡಿದೆ. ಕೊರೊನಾ ಹರಡುವುದನ್ನು ತಡೆಗಟ್ಟಲು ವಿಧಿಸಿದ ಲಾಕ್‌ಡೌನ್‌ನ ದಿನಗಳನ್ನು ಜನರು ಈಗಲೂ ನೆನಪಿಸಿಕೊಂಡು ಬೆಚ್ಚುವುದಿದೆ. ಅದರಿಂದ ನಮ್ಮ ಬದುಕು, ದಿನಚರಿ, ಬದುಕಿನ ಕುರಿತಾದ ದೃಷ್ಟಿಕೋನಗಳು ಎಲ್ಲವೂ ಬಹುಸೂಕ್ಷ್ಮವಾಗಿ ಬದಲಾಗಿಬಿಟ್ಟಿವೆ. ಹಾಗಾಗಿಯೇ ಆ ನೆನಪುಗಳನ್ನು ಮರುಕಳಿಸುವಂಥ ಸಿನಿಮಾಗಳು, ಕಿರುಚಿತ್ರಗಳು ಈಗಲೂ ಬರುತ್ತಿವೆ; ಮಳೆ ನಿಂತುಹೋದ ಮೇಲೂ ಮರದಿಂದ ಹನಿಗಳು ಉದುರುವಂತೆ.

'ಚೇಂಜ್' ಕೂಡ ಕೋವಿಡ್ ಲಾಕ್‌ಡೌನ್‌ನ ಕರಾಳ ದಿನಗಳನ್ನು ಮತ್ತೆ ನಮ್ಮ ಮನಸ್ಸಿಗೆ ತಂದುಕೊಡುವ ಕಿರುಚಿತ್ರ. ಕೋವಿಡ್ ಕಾಲದ ಆತಂಕ, ಒಂಟಿತನ, ಹಿಂಜರಿಕೆ, ಬೇಸರ ಎಲ್ಲವನ್ನೂ ಹಿಡಿದಿಡುವುದು ಈ ಕಿರುಚಿತ್ರದ ಉದ್ದೇಶ. ಹಾಗಾಗಿ ನೇರವಾದ, ಸ್ಪಷ್ಟವಾದ ಕಥೆಯೆಂಬುದು ಇಲ್ಲಿ ಸಿಗುವುದಿಲ್ಲ. ಬದಲಿಗೆ ಒಂದಿಷ್ಟು ಕಥೆಗಳು ಘಟಿಸಿದ, ಘಟಿಸಲಿರುವ ಕಾಲಮಾನಗಳ ನಡುವಿನ ಭಾವಮಿಡಿತವನ್ನು ಈ ಕಿರುಚಿತ್ರ ಹಿಡಿದಿಡುತ್ತದೆ. ಇಲ್ಲಿ ನೇರವಾದ ಒಂದು ಕಥೆಯ ನಿರೂಪಣೆ ಇಲ್ಲದಿದ್ದರೂ ಹಲವು ಕಥೆಗಳ ಛಾಯೆಗಳು ಕಾಣಿಸುತ್ತವೆ. ಅದರತ್ತ ಮನಸ್ಸು ಕುತೂಹಲದಿಂದ ವಾಲುವಂತೆ ಮಾಡುತ್ತದೆ.

> ಹೆಸರು: ಚೇಂಜ್ (ಇಂಗ್ಲಿಷ್
> ನಿರ್ದೇಶನ: ಅಬ್ರಾಹಂ ಫೆಲಿಕ್ಸ್
> ಛಾಯಾಗ್ರಹಣ: ರೇಯ್ನಾ ಹೋಪ್
> ಸಂಗೀತ: ಬೆನ್ ಹೆರಿಂಗ್ಟನ್
> ಸಂಕಲನ: ಬಿಬಿ ಬ್ಲಾಂಡರ್ಡ್
> ತಾರಾಗಣ: ಜಾರೆನ್ ಮೈಖೆಲ್,
> ಜಾಮೀ ನ್ಯೂಮನ್

ನಿರ್ದೇಶಕರೇ ಹೇಳಿಕೊಂಡಿರುವಂತೆ ಈ ಕಿರುಚಿತ್ರಕ್ಕೆ ಭೂಮಿಕೆ ಒದಗಿಸಿದ್ದು ಅವರೇ ಹಾದುಬಂದ ಕ್ವಾರಂಟೈನ್‌ನ ಅನುಭವ. ಅದೇ ಹಾಡು, ಅದೇ ಪುಸ್ತಕಗಳು, ಅದೇ ವಾರ್ತೆಯ ಏರುದನಿಯ ವಾಚನ ಇಡೀ ಬದುಕೇ ಕ್ಷಣ ಕ್ಷಣಕ್ಕೂ ನಕಲುಗೊಳ್ಳುತ್ತ ನಿಂತಲ್ಲೇ ನಿಂತಿದೆ ಎಂದು ಭಾಸವಾದ ಗಳಿಗೆಯಲ್ಲಿಯೇ ಮನುಷ್ಯನಿಗೆ ತನ್ನಂಥದೇ ಮನುಷ್ಯನ ಒಡನಾಟ ಎಷ್ಟು ಮುಖ್ಯ ಎಂಬುದೂ ಅರಿವಾಗುತ್ತದೆ. ಈ ಅರಿವಿನ ಗಳಿಗೆಯೇ ಈ ಕಿರುಚಿತ್ರದ ಜೀವಾಳ.

ಇಲ್ಲಿ ಕ್ವಾರಂಟೈನ್‌ಗೆ ಒಳಗಾದ ವ್ಯಕ್ತಿ, ಬೇಸರಗೊಂಡು ತನ್ನ ನೆರೆಯವಳನ್ನು ಮಾತಾಡಿಸಲು ಹೋಗುತ್ತಾನೆ. ಅದೂ ಭಯದಲ್ಲಿಯೇ! ಅವಳು ಯಾರೆಂಬುದೇ ಇವನಿಗೆ ಗೊತ್ತಿಲ್ಲ. ಮಾತಿನ ನಡುವೆಯೇ ಅವಳ ತಂದೆ ಕೊರೊನಾ ವೈರಸ್‌ಗೆ ಬಲಿಯಾದ ವಿಷಯ ತಿಳಿಯುತ್ತದೆ. ಅವರ ಮಾತುಗಳು ಅಲ್ಲಲ್ಲೇ ಗಿರಕಿ ಹೊಡೆಯಲಾರಂಭಿಸುತ್ತವೆ. ಮರಳಿ ಬಂದರೆ ಮತ್ತದೇ ವಾರ್ತೆ, ಮನೆಯ ಕೋಣೆ, ಕುರ್ಚಿ, ಮೇಜುಗಳು.

ರಾತ್ರಿ ಅಕ್ಕಪಕ್ಕದ ಮನೆಯಲ್ಲಿ ಇಬ್ಬರೂ ಒಂಟಿತನವನ್ನು ಹೇಗೆ ದಾಟಿಕೊಳ್ಳುವುದು ಎಂಬುದು ತಿಳಿಯದೆ ಚಡಪಡಿಸುತ್ತ ಕೂತಿದ್ದಾರೆ. ರಸ್ತೆಯಲ್ಲಿ ಅನಾಮಿಕನೊಬ್ಬ ಫೋನಿನಲ್ಲಿ ಮಾತಾಡುತ್ತಿದ್ದಾನೆ. ಆ ಮಾತಿನ ತುಂಬೆಲ್ಲ ಸಾವಿನ ಸುದ್ದಿಗಳೇ. ಆ ಸುದ್ದಿಗಳು ಹರಿದುಕೊಂಡು ತಮ್ಮ ಬದುಕಿಗೇ ಅಂಟಿಕೊಳ್ಳುತ್ತವೇನೋ ಎಂಬ ಆತಂಕ ಅದನ್ನು ಕೇಳುತ್ತ ಕೂತವರಲ್ಲಿ ಮಡುಗಟ್ಟಿದೆ.

ಓಪನ್ ಎಂಡಿಂಗ್ ಇರುವ ಈ ಕಿರುಚಿತ್ರ ಆ ಕ್ಷಣದ ಅನುಭವವನ್ನು ಅಷ್ಟೇ ತೀವ್ರವಾಗಿ ದಾಟಿಸುವಷ್ಟು ಶಕ್ತವಾಗಿದೆ. ಹದವಾದ ಸಂಗೀತ, ಪ್ರಬುದ್ಧವಾದ ಅಭಿನಯ, ತಾಂತ್ರಿಕ ಗಟ್ಟಿತನ ಎಲ್ಲವೂ ಈ ಕಿರುಚಿತ್ರಕ್ಕೆ ಗಟ್ಟಿಯಾದ ನೆಲೆಗಟ್ಟನ್ನು ಒದಗಿಸಿಕೊಟ್ಟಿದೆ.

ಈ ಕಿರುಚಿತ್ರ ವೀಕ್ಷಣೆಗೆ https://bit.ly/3S14h4B ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.